**ಕರ್ನಾಟಕ ಸರ್ಕಾರ**
**ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: ಡಿಟಿಇ 19 ಬಿಎಲ್‌ಡಿ 2020
ಅಡಕ:

**ಆಯುಕ್ತರ ಕಛೇರಿ**,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ: 24/06/2022.

## ಜ್ಞಾಪನ

**ವಿಷಯ:** 2022-23 ನೇ ಸಾಲಿನಿಂದ ಪ್ರಾರಂಭವಾಗುತ್ತಿರುವ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ದೂರವಾಣಿ ಹಾಗೂ ಅಂತರ್ಜಾಲ ಸಂಪರ್ಕ ಪಡೆಯುವ ಬಗ್ಗೆ.

**ಉಲ್ಲೇಖ:** ಸರ್ಕಾರದ ನಿರಾಕ್ಷೇಪಣಾ ಪತ್ರ ಸಂಖ್ಯೆ: ಇಡಿ 61 ಡಿಟಿಇ 2022, ದಿನಾಂಕ: 27.04.2022.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸರ್ಕಾರದ ನಿರಾಕ್ಷೇಪಣಾ ಪ್ರಮಾಣ ಪತ್ರಗಳಲ್ಲಿ 2022-23 ನೇ ಶೈಕ್ಷಣಿಕ ಸಾಲಿನಿಂದ ಹೊಸದಾಗಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಬೀದರ್ ಮತ್ತು ನರಗುಂದ ಸಂಸ್ಥೆಗಳನ್ನು ಪ್ರಾರಂಭಿಸಲು ಅನುಮತಿ ನೀಡಲಾಗಿರುತ್ತದೆ.

ಮೇಲ್ಕಂಡ ಸಂಸ್ಥೆಗಳಲ್ಲಿ ಎ.ಐ.ಸಿ.ಟಿ.ಇ, ನವದೆಹಲಿಯವರಿಂದ ಎಲ್.ಒ.ಎ ಪಡೆಯುವ ಸಂಬಂಧ ದೂರವಾಣಿ ಹಾಗೂ ಅಂತರ್ಜಾಲ ಸಂಪರ್ಕ ವ್ಯವಸ್ಥೆ ಮಾಡಿಸಬೇಕಾಗಿರುತ್ತದೆ. ಆದ್ದರಿಂದ ಸದರಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಎ.ಐ.ಸಿ.ಟಿ.ಇ ನಿಯಮಾನುಸಾರ ಅವಶ್ಯವಿರುವ ಅಂತರ್ಜಾಲ ಹಾಗೂ ದೂರವಾಣಿ ಸಂಪರ್ಕ ವ್ಯವಸ್ಥೆಯನ್ನು ಬಿ.ಎಸ್.ಎನ್.ಎಲ್ ಸಂಸ್ಥೆಯಿಂದ ಪಡೆಯಲು ಅಥವಾ ಬಿ.ಎಸ್.ಎನ್.ಎಲ್ ಸಂಪರ್ಕ ದೊರೆಯದ ಪ್ರದೇಶಗಳಲ್ಲಿ ಬೇರೆ ಖಾಸಗಿ ಸಂಪರ್ಕ ಒದಗಿಸುವ ಸಂಸ್ಥೆಗಳಿಂದ ನಿಯಮಾನುಸಾರ ಸಂಪರ್ಕ ಪಡೆದುಕೊಳ್ಳಲು ಅನುಮತಿ ನೀಡಲಾಗಿದೆ.

ಸದರಿ ಸಂಸ್ಥೆಗಳಲ್ಲಿ ಎ.ಐ.ಸಿ.ಟಿ.ಇ ನಿಯಮಾನುಸಾರ ಅವಶ್ಯವಿರುವ ಅಂತರ್ಜಾಲ ಹಾಗೂ ದೂರವಾಣಿ ಸಂಪರ್ಕ ವ್ಯವಸ್ಥೆಯನ್ನು ಬಿ.ಎಸ್.ಎನ್.ಎಲ್ ರವರಿಂದ ಪಡೆದಲ್ಲಿ, ಅಳವಡಿಕೆ ವೆಚ್ಚವನ್ನು ಮತ್ತು ಮಾಸಿಕ ಶುಲ್ಕವನ್ನು ಕ್ರಮವಾಗಿ ಇಂಜಿನಿಯರಿಂಗ್ ಕಾಲೇಜು ಲೆಕ್ಕಶೀರ್ಷಿಕೆ 2203-00-112-0-02-051 ರಡಿ ಹಾಗೂ 2203-00-112-0-02-052 ರಡಿ ಲಭ್ಯವಿರುವ ಅನುದಾನದಡಿ ಭರಿಸಲು ಹಾಗೂ ಇತರೆ ಖಾಸಗಿ ಸಂಪರ್ಕ ಸೇವೆ ಒದಗಿಸುವ ಸಂಸ್ಥೆಗಳಿಂದ ಸೇವೆ ಪಡೆದಲ್ಲಿ ಅಳವಡಿಕೆ ವೆಚ್ಚ ಹಾಗೂ ಮಾಸಿಕ ಶುಲ್ಕವನ್ನು ಇಂಜಿನಿಯರಿಂಗ್ ಕಾಲೇಜು ಲೆಕ್ಕಶೀರ್ಷಿಕೆ 2203-00-112-0-02-051 ರಡಿ ಲಭ್ಯವಿರುವ ಅನುದಾನದಲ್ಲಿ ನಿಯಮಾನುಸಾರ ಭರಿಸಲು ಅನುಮತಿ ನೀಡಲಾಗಿದೆ.

"ಟಿಪ್ಪಣಿ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ"

**ಜಂಟಿ ನಿರ್ದೇಶಕರು (ಆಡಳಿತ)**
**ತಾಂತ್ರಿಕ ಶಿಕ್ಷಣ ಇಲಾಖೆ**

**ಇವರಿಗೆ:**

1. **ಪ್ರಾಂಶುಪಾಲರು, ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಬೀದರ್.**
2. **ಪ್ರಾಂಶುಪಾಲರು, ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ನರಗುಂದ್.**
3. ಇ-ಗವರ್ನೆನ್ಸ್ ವಿಭಾಗಕ್ಕೆ - ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು